MR. SPEAKER.—Then replies will have to be laind on the Table of the House.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಂಡೇ ರಿಪಿಟ್ ಮಾಡೋಣ.

ಶ್ರೀ ಎ. ಲಕ್ಷ್ಮೀಸಾಗರ್.—ಮಂಡೇ ಕೊಶ್ಚನ್ಸ್ ಯಾವಾಗ ತೆಗೆದುಕೊಳ್ಳುವುದು ? That is not proper. These questions and answers will be placed on the Table of the House.

MR. CHAIRMAN.—Questions and Answers ಬೇಗ ಮಂಗಿಸೋಣ.

## ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

## ಗದಗ ಕೋ-ಆಪರೇಟಿವ್ ಕಾಟನ್ ಸೇಲ್ ಸೊಸೈಟಿಯ ಬಗ್ಗೆ

೨೫೦೫. ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗದಗ ಕೋ-ಆಪರೇಟಿವ್ ಕಾಟನ್ ಸೇಲ್ ಸೊಸೈಟಿಯ ಬಾಕಿ ವಸೂಲಾತಿಗೆ ಸಂಬಂಧಿಸಿದಂತೆ ಸಹಕಾರ ಇಲಾಖೆಯಲ್ಲಿ ಬಾಕಿ ಇರುವ ಪಂಚಾಯಿತ ದಾವಾ ಪ್ರಕರಣಗಳ ಸಂಖ್ಯೆ.

ಆ) ಪ್ರಕರಣಗಳು ಎಂದಿನಿಂದ ಬಾಕಿ ಇದೆ ಮತ್ತು ತಡವಾದುದಕ್ಕೆ ಕಾರಣಗಳು.

ಶ್ರೀ ಹೆಚ್ ವಿಶ್ವಾಂತಯ್ಯ (ಸಹಕಾರ ಸಚಿವರು).—

ಅ) ೧. ಗೌರವ ಮಧ್ಯಸ್ಥದಾರರಿಗೆ ವಹಿಸಿರುವ ಪ್ರಕರಣಗಳು — ೧೬೪

೨. ಧಾರವಾಡ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರ ಕಛೇರಿಯಲ್ಲಿರುವ ಪ್ರಕರಣಗಳು — ೩೪

ಒಟ್ಟು — ೧೯೮

ಆ) ೧೬೪ ಪ್ರಕರಣಗಳಲ್ಲಿ ೧೨೧ ಪ್ರಕರಣಗಳನ್ನು ದಿನಾಂಕ ೧೨-೯-೮೬ ರಂದು ಮತ್ತು ಉಳಿದ ೪೩ ಪ್ರಕರಣಗಳನ್ನು ದಿನಾಂಕ ೨೯-೧೦-೮೭ ರಂದು ಸಹಕಾರ ಸಂಘಗಳ ಉಪನಿಬಂಧಕರ ಕಛೇರಿಗೆ ಸಲ್ಲಿಸಲಾಗಿತ್ತು. ಆದರೆ ಈ ದಾವಾ ಅರ್ಜಿಗಳು ಅಪೂರ್ಣವಾಗಿದ್ದುದರಿಂದ, ಸಂಘವು ದಿನಾಂಕ ೦೮-೦೪-೧೯೮೮ ರಂದು ೧೨೧ ಪ್ರಕರಣಗಳನ್ನು ಮತ್ತು ದಿನಾಂಕ ೦೬-೦೫-೧೯೮೮ ರಂದು ೪೩ ಪ್ರಕರಣಗಳನ್ನು ಸರಿಪಡಿಸಿ ಸಲ್ಲಿಸಿತು. ಆ ನಂತರ ೧೨೧ ಪ್ರಕರಣಗಳನ್ನು ದಿನಾಂಕ ೨೨-೪-೧೯೮೮ ರಂದು ಮತ್ತು ೪೩ ಪ್ರಕರಣಗಳನ್ನು ದಿನಾಂಕ ೨೧-೫-೮೮ ರಂದು ಗೌರವ ಮಧ್ಯಸ್ಥದಾರರಿಗೆ ಇತ್ಯರ್ಥ ಕ್ಕಾಗಿ ವಹಿಸಿ ಕೊಡಲಾಗಿದೆ.

ಉಳಿದ ೩೪ ಪ್ರಕರಣಗಳು ದಿನಾಂಕ ೨೯-೪-೧೯೮೮ ರಂದು ಉಪನಿಬಂಧಕರ ಕಛೇರಿಗೆ ಬಂದಿದ್ದು, ಮುಂದಿನ ಕ್ರಮಕ್ಕಾಗಿ ಧಾರವಾಡ ಜಿಲ್ಲೆಯ ಸಹಕಾರ ಸಂಘಗಳ ಉಪನಿಬಂಧಕರ ಕಛೇರಿಯಲ್ಲಿ ಅವುಗಳನ್ನು ಪರಿಶೀಲಿಸಲಾಗುತ್ತಿದೆ. ದಾವಾ ಅರ್ಜಿಗಳು ಅಪೂರ್ಣವಾಗಿದ್ದು ಸರಿಪಡಿಸದಿದ್ದುದು ವಿಳಂಬವಾಗಲು ಕಾರಣವಾಗಿದೆ.

ಶ್ರೀ ಕೆ. ಹೆಚ್. ಪಾಟೀಲ್.—ಅಪೂರ್ಣವಾಗಿದ್ದು ಯಾವಾಗ ಗೊತ್ತಾಯಿತು, ಮತ್ತು ಏನು ಅಪೂರ್ಣವಾಗಿದೆ ? ಇದಕ್ಕೆ ಒಬ್ಬೊಬ್ಬರು ಡೆಪ್ಯುಟಿ ರಿಜಿಸ್ಟ್ರಾರನ್ನು ಇಟ್ಟುಕೊಂಡರೆ ವಸೂಲಿ ಕೆಲಸ ಹೇಗೆ ಆಗುತ್ತದೆ, ಮತ್ತು ಇಷ್ಟು ದಿವಸ ಎಂದು ಅವರಿಗೆ ಮಿತಿ ಹಾಕಿದ್ದೀರಾ ? ಹಾಗೇನಾದರು ಅವರಿಗೆ ವ್ಯವಸ್ಥೆ ಮಾಡಿದರೆ ಸಾಕೆ ? ಉಳಿದ ೧೬೦-೧೭೦ ಪ್ರಕರಣಗಳನ್ನು ಈಗ ರೆಫರ್ ಮಾಡಿದ್ದಾರೆ. ಮೊದಲಿನಿಂದಲೂ ಇದ್ದ ಆಫೀಸರ್ ಹತ್ತಿರ ಉಳಿಯುತ್ತವೆ. ಅದಕ್ಕೆ ಅಂಥವರ ಬಗ್ಗೆ ಏನಾದರೂ ತನಿಖೆ ಮಾಡುತ್ತೀರಾ ?

ಶ್ರೀ ಹೆಚ್. ವಿಶ್ವನಾಥಯ್ಯ.—ಸನ್ಮಾನ್ಯ ಅಧ್ಯಕ್ಷರೆ, ಅವರು ಹೇಳಿರುವ ರೀತಿಯಲ್ಲಿ ವಿಳಂಬವಾಗಿರುವುದು ನನಗೂ ಸಹ ಗೋಚರವಾಗಿದೆ. ಈ ವಿಳಂಬಕ್ಕೆ ಯಾರು ಕಾರಣರಾಗಿದ್ದಾರೆ, ಖಂಡಿತವಾಗಿಯೂ ಅಂತಹ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

## ಕರ್ನಾಟಕ ರಾಜ್ಯದ ಬರಗಾಲ ಪೀಡಿತ ಪ್ರದೇಶಗಳ ಬಗ್ಗೆ

೨೧೬೬. ಶ್ರೀ ಪಂಪಾಪತಿ (ದಾವಣಗೆರೆ).— ಮಾನ್ಯ ಕಂದಾಯ, ಯೋಜನಾ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯದ ಬರಗಾಲ ಪೀಡಿತ ಪ್ರದೇಶಗಳಾವುವು, ಹಾಗೂ ಕಂದಾಯ ಮನ್ನಾ ಮಾಡಿದ ಪ್ರದೇಶಗಳಾವುವು ?

ಆ) ಬರಗಾಲ ಪೀಡಿತ ಪ್ರದೇಶಗಳ ಜನರಿಗೆ ಒದಗಿಸಿರುವ ಅನುಕೂಲಗಳಾವುವು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನೆ ಮತ್ತು ನೀರಾವರಿ ಸಚಿವರು).—

ಅ) ರಾಜ್ಯದಲ್ಲಿ ಸತತ ಬರಗಾಲ ಪೀಡಿತ ಪ್ರದೇಶಗಳನ್ನು ಗುರುತಿಸಿ ಅವುಗಳನ್ನು ವರ್ಗಾ ಭಾಗಗಳಲ್ಲಿ ವರ್ಗೀಕರಿಸಿದೆ, ಅವುಗಳೆಂದರೆ ಕೇಂದ್ರ ಮತ್ತು ರಾಜ್ಯವಲಯಗಳು ವಿವರಗಳನ್ನು ಅನುಬಂಧದಲ್ಲಿ ನೀಡಿವೆ.

೨. ಕಂದಾಯ ಮನ್ನಾ ಮಾಡುವ ಬಗ್ಗೆ ಯಾವ ವರ್ಷಕ್ಕೆ ಎಂಬುದನ್ನು ಪ್ರಶ್ನೆಯಲ್ಲಿ ನಮೂದಿಸದೆ ಇರುವುದರಿಂದ, ಉತ್ತರಿಸಲಾಗುವುದಿಲ್ಲ.

ಆ) ಬರಗಾಲಕ್ಕೆ ತುತ್ತಾದ ಪ್ರದೇಶಗಳ ಜನರಿಗೆ ಒದಗಿಸುವ ಪರಿಹಾರ ಕಾರ್ಯಕ್ರಮಗಳು ಈ ಕೆಳಕಂಡಂತಿವೆ.—

೧. ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸರಬರಾಜು.

೨) ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಾಗಾಣಿಕೆ.

೩) ಕೆಲಸ ಅರಿಸಿ ಬಂದವರಿಗೆ ಉದ್ಯೋಗ ಒದಗಿಸುವುದು.

೪) ಮೇವು ಪೂರೈಕೆ.

೫) ವಿಶೇಷ ಪೌಷ್ಟಿಕ ಆಹಾರ.

೬) ಆರೋಗ್ಯ ರಕ್ಷಣೆ.

೭) ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಕೃಷಿ ಕಿರು ಚೀಲಗಳ ವಿತರಣೆ.

೮) ತರಕಾರಿ ಬೆಳೆಗಾಗಿ ಕಿರು ಚೀಲಗಳ ವಿತರಣೆ.

### ಅನುಬಂಧ – 1

ರಾಜ್ಯದಲ್ಲಿ ಸತತ ಬರಪೀಡಿತ ಎಂದು ಗುರುತಿಸಿರುವ ಪ್ರದೇಶಗಳ ವಿವರ

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ಕೇಂದ್ರ ವಲಯ (ಕ್ಷೇತ್ರ) | ರಾಜ್ಯ ವಲಯ (ತಾಲ್ಲೂಕು) |
|---|---|---|---|
| ೧ | ೨ | ೩ | ೪ |
| ೧. | ಬಿಜಾಪುರ | ೧ ಬಾದಾಮಿ<br>೨ ಬಾಗಲಕೋಟೆ<br>೩ ಬಾಗೇವಾಡಿ | |